REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 18 । 6 ಆಗಸ್ಟ್ 2025 । ಬುಧವಾರ । ಪುಟಗಳು : 8 । ಬೆಲೆ : 2/-

## ಬೀಳಗಿ ಪಟ್ಟಣ ಸಹಕಾರ ಬ್ಯಾಂಕ್ ರಜತ ಮಹೋತ್ಸವ ಸಮಾರಂಭ

## ಎಸ್.ಆರ್. ಪಾಟೀಲರ ಸಾಧನೆ ದೊಡ್ಡದು : ಸಚಿವ ಎಚ್.ಕೆ. ಪಾಟೀಲ




**ಬೀಳಗಿ:** ರಾಜಕೀಯ ಏರುಪೇರುಗಳನ್ನು ಬದಿಗೊತ್ತಿ ಮಾಜಿ ಸಚಿವ ಎಸ್.ಆರ್.ಪಾಟೀಲ ಅವರು ಬಾಡಗಂಡಿ ಎಂಬ ಪುಟ್ಟ ಗ್ರಾಮದಲ್ಲಿ ವಿವಿಧ ಸಂಸ್ಥೆಗಳನ್ನು ಸ್ಥಾಪಿಸಿ ಸಾವಿರಾರು ಕುಟುಂಬಗಳ ಜೀವನಕ್ಕೆ ಆಧಾರವಾಗಿದ್ದಾರೆ. ಅವರ ಸಾಹಸ ಶ್ಲಾಘನೀಯವಾದದ್ದು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಚ್.ಕೆ. ಪಾಟೀಲರು ಹೇಳಿದರು.

ದಿನಾಂಕ : 26–07–2025ರಂದು ಬೀಳಗಿ ತಾಲೂಕಿನ ಬಾಡಗಂಡಿ ಗ್ರಾಮದಲ್ಲಿ ಎಸ್.ಆರ್. ಪಾಟೀಲ ಸಮೂಹ ಸಂಸ್ಥೆಗಳಡಿ ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತದ ರಜತ ಮಹೋತ್ಸವದ ಅಂಗವಾಗಿ ಬ್ಯಾಂಕಿನ ನವೀಕೃತ ಕಟ್ಟಡ, ಶಾಖಾ ನೂತನ ಕಟ್ಟಡ ಮತ್ತು ಎಸ್.ಆರ್. ಪಾಟೀಲ ಶಿಕ್ಷಣ ಪ್ರತಿಷ್ಠಾನದ ವಿವಿಧ ಕಟ್ಟಡಗಳ ಉದ್ಘಾಟನೆ ಹಾಗೂ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬಾಡಗಂಡಿ ಗ್ರಾಮದಲ್ಲಿ ಎಲ್.ಕೆ.ಜಿ.ಯಿಂದ ಹಿಡಿದು ವೈದ್ಯಕೀಯ ಮಹಾವಿದ್ಯಾಲಯ, ಆಯುರ್ವೇದಿಕ್ ಕಾಲೇಜು ಸ್ಥಾಪಿಸಿದ್ದಾರೆ. ಇದರಿಂದ ಗ್ರಾಮೀಣ ಭಾಗದ ಜನರಲ್ಲಿ ಉತ್ತಮ ಶಿಕ್ಷಣ, ಆರೋಗ್ಯದ ಜತೆಗೆ ಉದ್ಯೋಗ ಸಿಕ್ಕಂತಾಗುತ್ತದೆ ಎಂದರು. 25 ವರ್ಷಗಳ ಹಿಂದೆ ಪ್ರಾರಂಭವಾದ ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತ ಯಾವುದೇ ಕಳಂಕವಿಲ್ಲದೆ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಒಂದಿಬ್ಬರನ್ನು ಹೊರತುಪಡಿಸಿ ಉಳಿದ ಎಲ್ಲ ಸದಸ್ಯರು ಎರಡು ದಶಕದಿಂದ ಬ್ಯಾಂಕ್‌ನೊಂದಿಗೆ ಉಳಿದಿದ್ದಾರೆ. ಎಸ್.ಆರ್. ಪಾಟೀಲ ಅವರ ನಾಯಕತ್ವದ ಗುಣ ಹಾಗೂ ನಿರ್ದೇಶಕರ ಒಗ್ಗಟ್ಟಿನಿಂದ ಬ್ಯಾಂಕ್ ಈ ಸಾಧನೆ ಮಾಡಿದೆ ಎಂದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮಾತನಾಡಿ ಸಣ್ಣ ಗ್ರಾಮದಲ್ಲಿ ಮೆಡಿಕಲ್, ಆಯುರ್ವೇದಿಕ್ ಕಾಲೇಜ್ ಕಟ್ಟುವ ಮೂಲಕ ಗಾಂಧೀಜಿ ಅವರ ಗ್ರಾಮ ಸ್ವರಾಜ್ ಕನಸನ್ನು ನನಸು ಮಾಡುತ್ತಿದ್ದಾರೆ. ಮಾಜಿ ಸಚಿವ ಎಸ್.ಆರ್. ಪಾಟೀಲ ಅವರೊಂದಿಗೆ ಅವರ ತಂಡ ಬೆನ್ನೆಲುಬಾಗಿ ನಿಂತಿರುವ ಪರಿಣಾಮ ಅವರು ಇಷ್ಟು ಸಂಸ್ಥೆಗಳನ್ನು ಹುಟ್ಟುಹಾಕಿ ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ ಎಂದರು. ಬಾಡಗಂಡಿ ಎಂಬ ಹುಟ್ಟೂರಿನಲ್ಲಿ ಸಾವಿರಾರು ಕೋಟಿ ರೂ. ವೆಚ್ಚದಲ್ಲಿ ಅನೇಕ ಶಾಲಾ ಕಾಲೇಜುಗಳನ್ನು ಸ್ಥಾಪಿಸಿ, ದೊಡ್ಡ ನಗರಗಳಲ್ಲಿ ದೊರಕುವ ಆರೋಗ್ಯ ಸೇವೆಯನ್ನು ಗ್ರಾಮೀಣ ಭಾಗದ ಜನರಿಗೆ ದೊರಕಿಸುವಲ್ಲಿ ಮುಂದಾಗಿದ್ದಾರೆ. ಜತೆಗೆ ಅವರಲ್ಲಿ ಉನ್ನತ ಶಿಕ್ಷಣ ಹಾಗೂ ಉದ್ಯೋಗವನ್ನು ನೀಡಿದಂತಾಗುತ್ತದೆ ಎಂದರು.

ಸಕ್ಕರೆ ಸಚಿವ ಶಿವಾನಂದ ಪಾಟೀಲ ಮಾತನಾಡಿ 11ಲಕ್ಷ ರೂ. ಹೂಡಿಕೆಯಿಂದ ಆರಂಭವಾದ ಬೀಳಗಿ ಪಟ್ಟಣ ಬ್ಯಾಂಕ್ ಇಂದು 900 ಕೋಟಿ ರೂ. ದುಡಿಯುವ ಬಂಡವಾಳದೊಂದಿಗೆ ಮುನ್ನಡೆಯುತ್ತಿದೆ. ಎಸ್.ಆರ್.ಪಾಟೀಲ ಅವರು ಜಿಲ್ಲಾ ಪಂಚಾಯ್ತಿ ಸದಸ್ಯರಾಗಿ ರಾಜಕೀಯದ ಎಲ್ಲ ಮಜಲುಗಳನ್ನು ಹತ್ತಿದ್ದಾರೆ. ರಾಜಕೀಯದ ಜತೆಗೆ ಅನೇಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ, ಅವುಗಳನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವುದು ಸಣ್ಣ ವಿಷಯವಲ್ಲ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಮಾತನಾಡಿ ಒಂದು ಸರಕಾರ ಮಾಡುವ ಕೆಲಸವನ್ನು ಮಾಜಿ ಸಚಿವ ಎಸ್.ಆರ್.ಪಾಟೀಲ ಮಾಡುತ್ತಿದ್ದಾರೆ. ಮೆಡಿಕಲ್ ಕಾಲೇಜ್, ಆಯುರ್ವೇದಿಕ್ ಕಾಲೇಜ್ ಸ್ಥಾಪಿಸಿ ಬಡವರಿಗೆ ಕೇವಲ ಐವತ್ತು ರೂಪಾಯಿಯಲ್ಲಿ ಅವರನ್ನು ಪರೀಕ್ಷಿಸುತ್ತಿದ್ದಾರೆ ಎಂದರು.

ಸಹಕಾರ ಸಂಘಗಳನ್ನು ಕಟ್ಟುವುದು ದೊಡ್ಡ ವಿಷಯವಲ್ಲ. ಅವುಗಳನ್ನು ಸ್ಥಾಪಿಸಿ, ಠೇವಣಿ ಇಟ್ಟ ದುಡ್ಡನ್ನು ದುಡಿಸುವುದು ಅಷ್ಟೇ ಮುಖ್ಯ. ಈ ಕಾರ್ಯವನ್ನು ಎಸ್.ಆರ್.ಪಾಟೀಲ ಸೇರಿ ಅವರ ತಂಡ ಮಾಡಿರುವ ಪರಿಣಾಮ ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದರು.

ಸಂಸದ ಪಿ.ಸಿ. ಗದ್ದಿಗೌಡರ ಮಾತನಾಡಿ ನಾನು ಹಾಗೂ ಮಾಜಿ ಸಚಿವ ಎಸ್.ಆರ್. ಪಾಟೀಲ ಅವರು ಒಂದೇ ಸಮಯದಲ್ಲಿ ರಾಜಕೀಯಕ್ಕೆ ಬಂದವರು. ರಾಜಕೀಯದ ಜತೆಗೆ ಗ್ರಾಮೀಣ ಭಾಗದ ಜನರಿಗೆ ಏನಾದರೂ ಸೇವೆ

3ನೇ ಪುಟಕ್ಕೆ...

ಎಂಸಿಸಿ ಬ್ಯಾಂಕ್ "ಐಡಿಯಾ ಸಮ್ಮಿತ್ 2025" ಆಯೋಜನೆ 4

ವಿಜಯಪುರದ ಸರಕಾರಿ ನೌಕರರ ಸಹಕಾರಿ ಬ್ಯಾಂಕಿಗೆ 3 ರಾಷ್ಟ್ರೀಯ ಪ್ರಶಸ್ತಿ 6

ನಿಮ್ಮ ಪ್ರಶ್ನೆ – ನಮ್ಮ ಉತ್ತರ 7

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



### ಹಿಂದುಳಿದವರು ಸಬಲೀಕರಣಗೊಳ್ಳದೇ, ದೇಶ ಅಭಿವೃದ್ಧಿಯ ಪಥದತ್ತ ಸಾಗಲು ಸಾಧ್ಯವಾಗದು

ದೇಶದ ನೂರು ಕೋಟಿಗೂ ಮಿಗಿಲಾದ ಜನಸಂಖ್ಯೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆಯೇ ಹೆಚ್ಚು. ಅವರುಗಳ ಬಳಿ ಸಂಪತ್ತೆನ್ನುವುದು ಶೂನ್ಯವಾದರೆ, ಕೆಲವೇ ಕೆಲ ಕೋಟ್ಯಾಧಿಪತಿಗಳ ಬಳಿ ಇರುವ ಅಪಾರ ಸಂಪತ್ತಿದೆ. ಕಾರ್ಮಿಕರ ದುಡುಮೆಯಿಂದಲೇ ಸಂಪತ್ತು ಬೆಳೆಯುತ್ತದೆಯಾದರೂ, ಅದು ಸೇರುವುದು ಸಿರಿವಂತರ ಬಳಿ.

ಇದರರ್ಥ; ದೇಶದ ಶೇ.70ರಷ್ಟು ಜನಸಂಖ್ಯೆಯ ಸಂಪತ್ತಿನ ನಾಲ್ಕು ಪಟ್ಟು ಹೆಚ್ಚು ಸಂಪತ್ತನ್ನು ಶೇ.1ರಷ್ಟು ಜನರ ಬಳಿ ಇದೆ ಎಂದಾಗುತ್ತದೆ. ಪ್ರಸ್ತುತ ಆರ್ಥಿಕ ವರ್ಷದ ಬಜೆಟ್ ಗಾತ್ರದಲ್ಲಿ ರೂ.50,65,345 ಕೋಟಿಯಾದರೆ, ಸಾಲದ ಪ್ರಮಾಣವೇ ರೂ. 15,68,936 ಕೋಟಿಯಷ್ಟಿದೆ. ಆದರೆ, ಕೇಂದ್ರ ಸರ್ಕಾರ ಮಂಡಿಸುವ ಬಜೆಟ್‌ನ ಒಟ್ಟು ಮೌಲ್ಯಕ್ಕಿಂತ ಹೆಚ್ಚಿನ ಸಂಪತ್ತು ದೇಶದ ಶೇ.1ರಷ್ಟು ಕೋಟ್ಯಾಧಿಪತಿಗಳ ಬಳಿ ಇದೆ.

ಪ್ರತಿ ವರ್ಷವೂ ಸಿರಿವಂತ ಉದ್ಯಮಿಗಳು ತಮ್ಮ ಉದ್ಯಮ ವಹಿವಾಟು ವ್ಯಾಪ್ತಿ ವಿಸ್ತರಿಸಿಕೊಳ್ಳುವ ಮೂಲಕ ತಮ್ಮ ಆದಾಯವನ್ನು ಹಲವು ಪಟ್ಟು ಹೆಚ್ಚಿಸಿಕೊಳ್ಳುತ್ತಾರೆ. ಆದರೆ, ಅವರ ಉದ್ಯಮಗಳಲ್ಲಿ, ಕೈಗಾರಿಕೆಗಳಲ್ಲಿ ದುಡಿಯುವ ನೌಕರರು, ಕಾರ್ಮಿಕರು ಬಡವರಾಗಿಯೇ ಉಳಿಯುತ್ತಿದ್ದಾರೆ, ಇದರರ್ಥ ಅವರು ತಮ್ಮ ದುಡಿಮೆಗೆ ತಕ್ಕ ಫಲವನ್ನು ಪಡೆಯುತ್ತಿಲ್ಲ ಎಂದಾಗುತ್ತದೆ ಅಲ್ಲವೇ?

ದೇಶದ ಆರ್ಥಿಕತೆಗೆ ಸರಿಸುಮಾರು ರೂ.71 ಲಕ್ಷ ಕೋಟಿಗೂ ಅಧಿಕ ಕೊಡುಗೆ ಸಂಘಟಿತ ಮತ್ತು ಅಸಂಘಟಿತ ವಲಯದಲ್ಲಿ ದುಡಿಯುವ ಜನರಿಂದ, ರೈತರಿಂದ, ಮಹಿಳೆಯರಿಂದ ಬರುತ್ತದೆ. ಆದರೆ, ಇಡೀ ಸಂಸಾರ ನಿಭಾಯಿಸುವ ಅವರ ಬಳಿ ನಾಳಿನ ತುತ್ತು ಅನ್ನಕ್ಕೂ ಗತಿಯಿರುವುದಿಲ್ಲ, ಇದು ವಿಪರ್ಯಾಸವಲ್ಲವೇ. ಇದನ್ನು ಸ್ವಲ್ಪ ಮಟ್ಟಿಗಾದರೂ, ಸರಿ ಪಡಿಸಬೇಕಲ್ಲವೇ? ಈ ರೀತಿಯಾಗಿ ಜನರ ನಡುವಿನ ಸಂಪತ್ತಿನ ಅಂತರ ದಿನದಿಂದ ದಿನಕ್ಕೆ ವಿಸ್ತರಿಸುತ್ತಲೇ ಹೋದಲ್ಲಿ, ಮುಂದಿನ ದಿನಗಳಲ್ಲಿ ಇದಕ್ಕೆ ಬಾರಿ ಬೆಲೆ ತೆರಬೇಕಾಗುತ್ತದೆ. ಆ ಬಗ್ಗೆ ತೀವ್ರ ಚಿಂತನೆ ನಡೆಸುವ ಅಗತ್ಯವಿದೆ.

ಆರ್ಥಿಕ, ಸಾಮಾಜಿಕ ಅನ್ಯಾಯ ದ್ವೇಷವನ್ನು ಸೃಷ್ಟಿಸುತ್ತದೆ. ನಿರುದ್ಯೋಗವು ಕೇವಲ ಹತ್ತು ವರ್ಷಗಳ ನಂತರ ಅತ್ಯಧಿಕವಾಗಿದೆ, ದಲಿತರು, ಒಬಿಸಿಗಳು, ಆದಿವಾಸಿಗಳು ಶೇ.73ರಷ್ಟಿದ್ದು ಅವರುಗಳಿಗೆ ಯಾವುದೇ ಸವಲತ್ತುಗಳು ದೊರೆಯುತ್ತಿಲ್ಲ. ಇದರ ನಿವಾರಣೆಗಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಅಸಮಾನತೆ ನಿವಾರಿಸಲು, ಆರ್ಥಿಕ ಅಬಲ ವರ್ಗದ ಜನರ ಸ್ಥಿತಿ ಉತ್ತಮ ಪಡಿಸುವ ಸಲುವಾಗಿಯೇ ಅನೇಕ ಯೋಜನೆಗಳನ್ನು ರೂಪಿಸುತ್ತಲೇ ಬಂದಿದೆಯಾದರೂ, ಈ ಅಪಾರ ಅಂತರ ಸೃಷ್ಟಿಯಾಗುತ್ತಿರುವುದು ಆತಂಕಕಾರಿಯಾಗಿ ಕಾಣುತ್ತಿದೆ. ಯೋಜನೆಗಳನ್ನು ರೂಪಿಸುವುದು, ಅನುದಾನ ನೀಡುವುದು ಸರ್ಕಾರಗಳ ಕೆಲಸವಾದರೆ, ಅದನ್ನು ಸಮರ್ಪಕವಾಗಿ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಳ್ಳಬೇಕಾದದ್ದು, ಆಡಳಿತ ಯಂತ್ರದ ಕೆಲಸ.

ಇದನ್ನು ಸರಿಪಡಿಸಬೇಕಿದ್ದಲ್ಲಿ, ಆಡಳಿತ ಯಂತ್ರ ಹೆಚ್ಚು ಸಂವೇದನಾಶೀಲವಾಗಬೇಕಿದೆ ಹಾಗೂ ಕ್ರಿಯಾಶೀಲಗೊಳ್ಳುವ, ಅಗತ್ಯವಿದೆ. ಇಲ್ಲದಿದ್ದಲ್ಲಿ, ಆರ್ಥಿಕವಾಗಿ ಹಿಂದುಳಿದವರು ಸಬಲೀಕರಣಗೊಳ್ಳದೇ, ದೇಶ ಅಭಿವೃದ್ಧಿಯ ಪಥದತ್ತ ಸಾಗಲು ಸಾಧ್ಯವಾಗದು ಎನ್ನುವುದನ್ನು ನೆನಪಿಡಬೇಕು. ಈ ಆರ್ಥಿಕ ಅಸಮಾನತೆ ನಿವಾರಣೆಯೇ ಅಲ್ಲವೇ ನಮ್ಮ ಸಹಕಾರ ಕ್ಷೇತ್ರದ ಮೂಲಮಂತ್ರ ಎನ್ನುವುದು ಸಹಕಾರಿಗಳಾದ ನಮಗೆ ಹೆಮ್ಮೆಯ ವಿಷಯ.

▶▶ ಎಚ್.ಕೆ. ಪಾಟೀಲ

## ದಿ ತಾಳಿಕೋಟಿ ಸಹಕಾರಿ ಬ್ಯಾಂಕ ನಿ., ತಾಳಿಕೋಟಿ ಬ್ಯಾಂಕಿಗೆ ರೂ. 142.30 ಲಕ್ಷ ನಿವ್ವಳ ಲಾಭ



ಶ್ರೀ ಕೆ.ಸಿ. ಸಜ್ಜನ
ಅಧ್ಯಕ್ಷರು



ಶ್ರೀಮತಿ ಬಿ.ಕೆ. ಮಣ್ಣೂರ
ಪ್ರಧಾನ ವ್ಯವಸ್ಥಾಪಕರು

**ತಾಳಿಕೋಟಿ:** ದಿ ತಾಳಿಕೋಟಿ ಸಹಕಾರಿ ಬ್ಯಾಂಕ ನಿಯಮಿತ., ತಾಳಿಕೋಟಿ. ಬ್ಯಾಂಕು ಮಾರ್ಚ 31, 2025ಕ್ಕೆ ಅಂತ್ಯಗೊಂಡ 2024-25 ನೇ ಹಣಕಾಸು ವರ್ಷದಲ್ಲಿ ಒಟ್ಟು ರೂ.369.37ಲಕ್ಷ, ಆದಾಯ ಗಳಿಸಿದ್ದು, ಇದರಲ್ಲಿ ರೂ.170.00 ಲಕ್ಷ ಕರಡು ಸಾಲ ನಿಧಿಗೆ, ಹಾಗೂ ಉತ್ಪಾದಕ ಆಸ್ತಿಗಳಿಗೆ ರೂ.7.67 ಲಕ್ಷ ತೆಗೆದಿರಿಸಿ, ರೂ. 49.40 ಲಕ್ಷ ಆದಾಯ ತೆರಿಗೆ ಪಾವತಿಸಿ, ರೂ.142.30 ಲಕ್ಷ ನಿವ್ವಳ ಲಾಭಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕಾಶಿನಾಥ ಚಂದಪ್ಪ ಸಜ್ಜನ ಇವರು ತಿಳಿಸಿದರು.

ಪ್ರಸ್ತುತ 9131 ಸಾಮಾನ್ಯ ಸದಸ್ಯರು, 1446 ಸಹ ಸದಸ್ಯರು ಹೀಗೆ ಒಟ್ಟು10577 ಸದಸ್ಯರಿದ್ದು, ಒಟ್ಟು ರೂ.588.18 ಲಕ್ಷ ಶೇರು ಬಂಡವಾಳ, ರೂ.2271.91 ಲಕ್ಷ ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು, ರೂ.19561.06 ಲಕ್ಷ ಠೇವುಗಳು ಹೊಂದಿದ್ದು, ಸಾಲಗಾರರಿಂದ ವರ್ಷಾರ್ಂತ್ಯಕ್ಕೆ ಬರತಕ್ಕ ಸಾಲ ಬಾಕಿ ರೂ.13509.73 ಲಕ್ಷ ಇದ್ದು, ಇದರ ಪೈಕಿ ಅನುತ್ಪಾದಕ ಸಾಲದ(ಎನ್.ಪಿ.ಎ) ಮೊತ್ತ ರೂ.668.41 ಲಕ್ಷವಿದ್ದು ಒಟ್ಟು ಬರತಕ್ಕ ಸಾಲದ ಮೊತ್ತಕ್ಕೆ ಶೇಕಡಾ 4.95% ಇದ್ದು ನಿವ್ವಳ ಎನ್.ಪಿ.ಎ. ಶೇಕಡಾ "0%" ಇರುತ್ತದೆ ಎಂದು ಉಪಾಧ್ಯಕ್ಷರಾದ ಶ್ರೀ ಚಿಂತಪ್ಪಗೌಡ ಸಾಹೇಬಗೌಡ ಯಾಳಗಿ ತಿಳಿಸಿದರು.

ಒಟ್ಟು ದುಡಿಯುವ ಬಂಡವಾಳವು ರೂ.22434.00 ಲಕ್ಷ ಇದ್ದು, ಹಾಗೂ ವರ್ಷಾರ್ಂತ್ಯಕ್ಕೆ ಸಿ.ಆರ್.ಎ.ಆರ್. ಪ್ರಮಾಣ ಶೇ.16.41 ರಷ್ಟು ಇರುತ್ತದೆ.

ನಿರ್ದೇಶಕರಾದ ಶ್ರೀ ಈಶ್ವರಪ್ಪ ಬ. ಬಿಳೇಭಾವಿ, ಶ್ರೀ ಮುರಿಗೆಪ್ಪ ಸಂ. ಸರಶೆಟ್ಟಿ, ಶ್ರೀ ದತ್ತಾತ್ರೇಯ ಎಸ್. ಹೆಬಸೂರ, ಶ್ರೀ ಸುರೇಶ ಸಿ. ಪಾಟೀಲ, ಶ್ರೀ ಅಮರಸಿಂಗ ವ್ಹಿ. ಹಜೇರಿ, ಶ್ರೀ ದ್ಯಾಮನಗೌಡ ಕೆ. ಪಾಟೀಲ, ಶ್ರೀ ಪ್ರಲ್ಹಾದಸಿಂಗ ವ್ಹಿ. ಹಜೇರಿ, ಶ್ರೀಮತಿ ಗಿರಿಜಾ ಬಿ. ಕೊಡಗಾನೂರ, ಶ್ರೀಮತಿ ಶೈಲಾ ವ್ಹಿ. ಬಡದಾಳಿ, ಶ್ರೀ ರಾಮಪ್ಪ ಬಿ. ಕಟ್ಟಿಮನಿ, ಶ್ರೀ ಸಂಜಯ ವಾಯ್. ಬರದೇನಾಳ, ವೃತ್ತಿಪರ ನಿರ್ದೇಶಕರಾದ ಶ್ರೀ ಮಲ್ಲಣ್ಣ ಬಿ. ಕೊಣ್ಣೂರ, ಶ್ರೀ ರಂಗನಾಥ ಎಸ್. ನೂಲಿಕರ ಹಾಗೂ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಬಸಮ್ಮ ಕೆ. ಮಣ್ಣೂರ ಹಾಗೂ ಎಲ್ಲ ಸಿಬ್ಬಂದಿ ವರ್ಗದವರು ಹಾಜರಿದ್ದರು.

...1ನೇ ಪುಟದಿಂದ



ಮಾಡಬೇಕು ಎಂಬ ಮಹಾದಾಸೆಯಿಂದ ಅವರು ಬೀಳಗಿ ತಾಲೂಕಿನಲ್ಲಿ ಶಿಕ್ಷಣ ಸಂಸ್ಥೆ ಹಾಗೂ ಕಾರ್ಖಾನೆಗಳನ್ನು ಕಟ್ಟಿ ಬೆಳೆಸುತ್ತಿದ್ದಾರೆ. ವೈದ್ಯಕೀಯದಂತಹ ಶಿಕ್ಷಣ ರೈತರ ಮಕ್ಕಳಿಗೆ ದೊರಕಬೇಕು ಎಂಬ ಕನಸಿನೊಂದಿಗೆ ಗ್ರಾಮದಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸಿದ್ದಾರೆ ಎಂದು ತಿಳಿಸಿದರು.

ಎಸ್.ಆರ್. ಪಾಟೀಲ ಪ್ರಾಸ್ತಾವಿಕ ಮಾತನಾಡಿ ತಾಲೂಕಿನ ಅನೇಕ ಹಳ್ಳಿಗಳು ಕೃಷ್ಣಾ ಮೇಲ್ದಂಡೆ ಯೋಜನೆ ಮಡಿಲು ಸೇರಿದಾಗ ಬಹುತೇಕ ಜನ ಆಸ್ತಿ ಕಳೆದುಕೊಂಡು ಅತಂತ್ರ ಸ್ಥಿತಿಯಲ್ಲಿ ಇದ್ದಾಗ ಸಂತ್ರಸ್ಥರ ಬದುಕಿಗೆ ಅಲ್ಪವಾದರೂ ಆರ್ಥಿಕ ನೆರವು ಬೇಕಾಗಿರುವ ಸಂಧಿಗ್ದ ಪರಿಸ್ಥಿತಿಯಲ್ಲಿ ಸಮಯೋಚಿತ ನಿರ್ಧಾರ ತೆಗೆದುಕೊಂಡವರು 1997ರಲ್ಲಿ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕು ಉದ್ಘಾಟನೆಗೊಂಡಿದ್ದು ಈ ಭಾಗದ ಜನತೆಗೆ ಅವಿಸ್ಮರಣೀಯ ಸಂಗತಿ 11 ಜುಲೈ 1997ರಂದು ಕೇವಲ 11ಲಕ್ಷ 6 ನೂರು ರೂಪಾಯಿಗಳ ಷೇರು ಬಂಡವಾಳದೊಂದಿಗೆ ಪ್ರಾರಂಭವಾದ ಈ ಬ್ಯಾಂಕು ಸಂತ್ರಸ್ತರ ಬದುಕನ್ನು ಹಸನಗೊಳಿಸಲು ಪ್ರಯತ್ನಿಸುತ್ತಿದೆ. 31 ಮಾರ್ಚ್ 2025ಕ್ಕೆ ರೂ.757 ಕೋಟಿಯಷ್ಟು ಠೇವಣಿಯನ್ನು ಅತ್ಯಂತ ಪ್ರಾಮಾಣಿಕ ಹಾಗೂ ನಿಯತ್ತಿನಿಂದ ಸಾಧನೆ ಮಾಡುತ್ತಿರುವುದಲ್ಲದೇ ರೂ.474ಕೋಟಿಯಷ್ಟು ಹಣವನ್ನು ಸಾಲದ ರೂಪದಲ್ಲಿ ನೀಡಿ ಈ ಭಾಗದ ಜನರ ಆರ್ಥಿಕ ಸದೃಢತೆಗೆ ನಿರಂತರ ಶ್ರಮಿಸುತ್ತಿದೆ ಹಾಗೂ ರೂ.81ಕೋಟಿ ನಿಧಿಯನ್ನು ಹೊಂದಿದೆ. ಅಲ್ಲದೆ ಈ ಭಾಗದ ರೈತರು ಸಣ್ಣಪುಟ್ಟ ವ್ಯಾಪಾರಿಗಳಿಗೆ ಬೀಳಗಿ ಪಟ್ಟಣ ಸಹಕಾರ ಬ್ಯಾಂಕ್ ಸಹಾಯ ಸಹಕಾರ ಮಾಡಿದ್ದು ನಮ್ಮ ಬ್ಯಾಂಕ್ ವರ್ಷದಿಂದ ವರ್ಷಕ್ಕೆ ತನ್ನ ಠೇವಣಿ ಮಾಡಿಕೊಳ್ಳುವುದರ ಜೊತೆಗೆ ಜಿಲ್ಲೆಯಲ್ಲಿಯೇ ಅತೀ ಕಡಿಮೆ ಅವಧಿಯಲ್ಲಿ ಉತ್ತಮ ಬೆಳವಣಿಗೆ ಕಂಡ ಈ ಬ್ಯಾಂಕು ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆಶ್ಚರ್ಯಕರ ರೀತಿಯಲ್ಲಿ ರೂ.900 ಕೋಟಿ ದುಡಿಯುವ ಬಂಡವಾಳದೊಂದಿಗೆ ಬೃಹದಾಕಾರವಾಗಿ ಬೆಳೆದು ಮುನ್ನುಗ್ಗುತ್ತಿದೆ ಎಂದು ತಿಳಿಸಲು ಸಂತೋಷವೆನಿಸುತ್ತಿದೆ ಎಂದರು.

ನಂತರ ಸಭೆಯನ್ನು ಉದ್ದೇಶಿಸಿ ಸಚಿವ ಕೆ.ಎಚ್. ಮುನಿಯಪ್ಪ ಹಾಗೂ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರುಗಳು ಮಾತನಾಡಿದರು. ಈ ವೇಳೆ ಜಾಜಿ ಮಲ್ಲಿಗೆ ಕವಿ ಡಾ. ಸತ್ಯಾನಂದ್ ಪಾತ್ರೋಟ್ ಅವರ ಪರಿಶ್ರಮ ನೆನಪಿನ ಸಂಚಿಕೆ ಬಿಡುಗಡೆ ಮಾಡಲಾಯಿತು.

ಎಲೆಕ್ಟ್ರಾನಿಕ್ ಬಟನ್ ಒತ್ತುವುದರ ಮೂಲಕ ಶಾಂತಾದೇವಿ ಸ್ಮರಣಾರ್ಥ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ನೂತನ ಕಟ್ಟಡದ ಉದ್ಘಾಟನೆಯನ್ನು ಗದಗ ಡಂಬಳದ ಡಾ: ತೋಂಟದ ಸಿದ್ದರಾಮ ಮಹಾಸ್ವಾಮಿಗಳು ಚಾಲನೆ ನೀಡಿದರೆ, ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕಿನ ನವೀಕೃತ ಕಟ್ಟಡದ ಉದ್ಘಾಟನೆಯನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್. ಕೆ. ಪಾಟೀಲ, ಪೂರ್ವ ಪ್ರಾಥಮಿಕದಿಂದ ಸ್ನಾತಕೋತ್ತರ ಪದವಿವರೆಗಿನ ವಿವಿಧ ಕಟ್ಟಡಗಳ ಶಂಕು ಸ್ಥಾಪನೆಯನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಎಸ್.ಆರ್. ಪಾಟೀಲ ಬಿ.ಎಸ್.ಸಿ. ನರ್ಸಿಂಗ್ ಕಾಲೇಜಿನ ಉದ್ಘಾಟನೆಯನ್ನು ಸಕ್ಕರೆ ಸಚಿವ ಶಿವಾನಂದ ಪಾಟೀಲ, ಎಸ್.ಆರ್. ಪಾಟೀಲ ಕಾಲೇಜ ಆಫ್ ಅಲೈಡ್ ಹೆಲ್ತ್ ಸೈನ್ಸ್ ಉದ್ಘಾಟನೆಯನ್ನು ಸಂಸದ ಪಿ.ಸಿ. ಗದ್ದಿಗೌಡರ, 650 ಆಸನ ಸೌಲಭ್ಯವುಳ್ಳ ಸಭಾಂಗಣದ ಶಂಕುಸ್ಥಾಪನೆಯನ್ನು ಶಾಸಕ ಎಚ್.ವಾಯ್. ಮೇಟಿ, ಆಡಳಿತ ಕಛೇರಿಯ ಶಂಕು ಸ್ಥಾಪನೆಯನ್ನು ಭೀಮಸೇನ ಚಿಮ್ಮನಕಟ್ಟಿ, ಸ್ನಾತಕೋತ್ತರ ವಿದ್ಯಾರ್ಥಿಗಳ ವಸತಿ ನಿಲಯದ ಶಂಕುಸ್ಥಾಪನೆಯನ್ನು ವಿಧಾನ ಪರಿಷತ್ ಸದಸ್ಯ ಪಿ.ಎಚ್. ಪೂಜಾರ, 500 ವಿದ್ಯಾರ್ಥಿಗಳ ವಸತಿ ನಿಲಯದ ಶಂಕು ಸ್ಥಾಪನೆಯನ್ನು ಎಚ್.ಆರ್. ನಿರಾಣಿ, ವಾಣಿಜ್ಯ ಸಂಕೀರ್ಣಗಳ ಶಂಕು ಸ್ಥಾಪನೆಯನ್ನು ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಎಸ್.ಜಿ. ನಂಜಯ್ಯನಮಠ, ಎನ್.ಆರ್.ಐ ವಸತಿ ಗೃಹದ ಉದ್ಘಾಟನೆಯನ್ನು ಕೆ.ಪಿ.ಸಿ.ಸಿ. ಮಾಜಿ ಕಾರ್ಯದರ್ಶಿ ಬಸವಪ್ರಭು ಸರನಾಡಗೌಡ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಬೀಳಗಿ ಪಟ್ಟಣ ಸಹಕಾರ ಬ್ಯಾಂಕಿನ ಉಪಾಧ್ಯಕ್ಷ ಎಸ್.ಆರ್. ಮೇಲ್ನಾಡ, ಎಸ್.ಆರ್.ಪಿ. ಶಿಕ್ಷಣ ಪ್ರತಿಷ್ಠಾನದ ಕಾರ್ಯದರ್ಶಿ ಎಂ.ಎನ್. ಪಾಟೀಲ, ಬೀಳಗಿ ಪಟ್ಟಣ ಸಹಕಾರ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಜಿ.ಎಸ್. ಬನಹಟ್ಟಿ, ಬಿ.ಎ.ಎಂ.ಎಸ್. ಕಾಲೇಜಿನ ಪ್ರಾಚಾರ್ಯ ಡಾ.ಬಿ.ಬಿ. ಬಾಳಿಕಾಯಿ, ಪ್ರತಿಷ್ಠಾನದ ಮುಖ್ಯ ಲೆಕ್ಕಾಧಿಕಾರಿ ಅಶೋಕ ದಾದಮಿ, ಸಾಹಿತಿ ಸತ್ಯಾನಂದ ಪಾತ್ರೋಟ, ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ನಿರ್ದೇಶಕರುಗಳು ಉಪಸ್ಥಿತರಿದ್ದರು.

## ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹೊಸದಾಗಿ ನೇಮಕಗೊಂಡ ಸಿಬ್ಬಂದಿಗಳಿಗೆ ಹಾಗೂ ಅಧಿಕಾರಿ ವರ್ಗದವರಿಗೆ ಮೂರು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹೊಸದಾಗಿ ನೇಮಕಗೊಂಡ ಸಿಬ್ಬಂದಿಗಳಿಗೆ ಹಾಗೂ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಮೂರು ದಿನಗಳ ಉನ್ನತ ಮಟ್ಟದ "ನಿರ್ವಹಣೆ ಅಭಿವೃದ್ಧಿ ತರಬೇತಿ" (Management Development Programme) ಯನ್ನು ಪ್ರಾರಂಭಿಸಲಾಗಿದೆ. ಇತ್ತೀಚೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ಅವುಗಳನ್ನು ಸಮರ್ಥವಾಗಿ ನಿರ್ವಹಿಸಲು ಈ ದೀರ್ಘಾವಧಿಯ ತರಬೇತಿಯನ್ನು ಏರ್ಪಡಿಸಲಾಗಿದೆ. ಈ ಸದರಿ 10ನೇ Batch ತರಬೇತಿಯನ್ನು ದಿನಾಂಕ:18.08.2025 ರಂದು ಬೆಳಿಗ್ಗೆ 09.00 ಗಂಟೆಯಿಂದ ದಿನಾಂಕ:20.08.2025ರ ಸಾಯಂಕಾಲ 05.30 ಗಂಟೆಯವರೆಗೆ ಒಟ್ಟು ಮೂರು ದಿನಗಳ ಕಾಲ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್ಐಸಿಎಂ) ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು–560 070 ಇಲ್ಲಿ ಏರ್ಪಡಿಸಲಾಗಿದೆ. ದಿನಾಂಕ:11.08.2025ರೊಳಗಾಗಿ ಮಹಾಮಂಡಳದಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ.

# ಎಂಸಿಸಿ ಬ್ಯಾಂಕ್ 'ಐಡಿಯಾ ಸಮ್ಮಿತ್ 2025' ಆಯೋಜನೆ




**ಮಂಗಳೂರು:** ಬ್ಯಾಂಕಿಂಗ್‌ನಲ್ಲಿ ಹೊಸ ದಿಗಂತಗಳನ್ನು ಅನ್ವೇಷಿಸಲು ಮತ್ತು ಮುಂದಿನ ಹಂತದ ಬೆಳವಣಿಗೆಗೆ ವಿಚಾರ, ಅಭಿಪ್ರಾಯ ಮತ್ತು ಸಲಹೆಗಳನ್ನು ಸಂಗ್ರಹಿಸಲು, ಎಂಸಿಸಿ ಬ್ಯಾಂಕ್ ಜುಲೈ 24, 2025 ರಂದು ಮಂಗಳೂರಿನ ಅತ್ತಾವರದಲ್ಲಿರುವ ಹೋಟೆಲ್ ಅವತಾರ್‌ನಲ್ಲಿ "ಐಡಿಯಾ ಸಮ್ಮಿತ್ 2025" (Idea Summit2025) ಅನ್ನು ಆಯೋಜಿಸಲಾಗಿತ್ತು.

ಈ ಸಮ್ಮಿತ್‌ನ ಅಧ್ಯಕ್ಷತೆಯನ್ನು ಎಂಸಿಸಿ ಬ್ಯಾಂಕ್‌ನ ಅಧ್ಯಕ್ಷರಾದ ಸಹಕಾರ ರತ್ನ ಶ್ರೀ ಅನಿಲ್ ಲೋಬೋ ಅವರು ವಹಿಸಿದ್ದರು. ಗಣ್ಯ ಭಾಷಣಕಾರರಲ್ಲಿ ಹೆಸರಾಂತ ಎನ್‌ಆರ್‌ಐ ಉದ್ಯಮಿ ಮತ್ತು ಉದಾರ ದಾನಿ ಶ್ರೀ ಮೈಕಲ್ ಡಿಸೋಜಾ, ಎನ್‌ಐಟಿಕೆ ಸುರತ್ಕಲ್‌ನ ನಿವೃತ್ತ ಪ್ರಾಧ್ಯಾಪಕರು (HAG) ಪ್ರೊ. ಡಾ। ಅಲೋಶಿಯಸ್ ಸಿಕ್ವೇರಾ, ಆರ್‌ಎಂಸಿಆರ್ & ಕಂ., ಪಾಲುದಾರರಾದ ಸಿಎ ಮ್ಯಾಕ್ಸಿಮ್ ಎಂ. ಫೆರ್ನಾಂಡಿಸ್, ಚಾರ್ಟರ್ಡ್ ಅಕೌಂಟೆಂಟ್, ಆರ್ಬಿಟ್ರೇಟರ್ ಮತ್ತು IIMkozhikode ಇದರ ಅತಿಥಿ ಪ್ರಾಧ್ಯಾಪಕ ಪ್ರೊ. ಸಿಎ ಲಾಯ್ನಲ್ ಅರಾನ್ಹಾ ಮತ್ತು ಅನುಭವಿ ಬ್ಯಾಂಕರ್ ಹಾಗೂ ಬ್ಯಾಂಕ್ ಆಫ್ ಮಹಾರಾಷ್ಟ್ರದ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಶ್ರೀ ಅಲೆನ್ ಸಿ. ಪಿರೇರಾ ಉಪಸ್ಥಿತರಿದ್ದರು. ಕಳೆದ ಏಳು ವರ್ಷಗಳಲ್ಲಿ ಎಂಸಿಸಿ ಬ್ಯಾಂಕ್‌ನ ಗಮನಾರ್ಹ ಬೆಳವಣಿಗೆ ಮತ್ತು ಕಳೆದ 105 ವರ್ಷಗಳ ಪ್ರಗತಿಯನ್ನು ಪ್ರಸ್ತುತಪಡಿಸಲಾಯಿತು. ಮಂಗಳೂರಿನ ಬಿಷಪ್ ಪೂಜ್ಯ ಡಾ। ಪೀಟರ್ ಪಾವ್ಲ್ ಸಲ್ಡಾನ್ಹಾ ಮತ್ತು ಉಡುಪಿಯ ಬಿಷಪ್ ಪೂಜ್ಯ ಡಾ। ಜೆರಾಲ್ಡ್ ಐಸಾಕ್ ಲೋಬೋ ಅವರು ಉಪಸ್ಥಿತರಿದ್ದ ಗಣ್ಯರೊಂದಿಗೆ ಸಭೆಯನ್ನು ಉದ್ಘಾಟಿಸಿದರು.

ಸಭೆಯಲ್ಲಿ ಉಪಾಧ್ಯಕ್ಷರು, ನಿರ್ದೇಶಕರು, ಜನರಲ್ ಮ್ಯಾನೇಜರ್, ಡೆಪ್ಯೂಟಿ ಜನರಲ್ ಮ್ಯಾನೇಜರ್, ಹಿರಿಯ ವ್ಯವಸ್ಥಾಪಕರು, ಶಾಖಾ ವ್ಯವಸ್ಥಾಪಕರು, ಬ್ಯಾಂಕ್ ಅಧಿಕಾರಿಗಳು, ಸಂಘ ಸಂಸ್ಥೆಗಳ ಮುಖ್ಯಸ್ಥರು ಮತ್ತು ಉನ್ನತ ಠೇವಣಿದಾರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶ್ರೀ ಫ್ಲಾಯ್ಡ್ ಡಿಮೆಲ್ಲೋ ನಿರೂಪಿಸಿದರು.

## ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು : 62ನೇ ಸರ್ವ ಸದಸ್ಯರ ವಾರ್ಷಿಕ ಸಭೆ



**ಬೆಂಗಳೂರು:** ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು. ಇದರ 2024–25ನೇ ಸಾಲಿನ 62ನೇ ಸರ್ವ ಸದಸ್ಯರ ವಾರ್ಷಿಕ ಸಭೆಯು ದಿ:27.07.2025ರ ಭಾನುವಾರದಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಟಿ.ಭಾಸ್ಕರ್ (ಟಿ.ಟಿ) ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಡಾ. ಟಿ.ಎಸ್.ಕೃಷ್ಣಮೂರ್ತಿ (ಜರಿಕೃಷ್ಣ)ರವರು, ನಿರ್ದೇಶಕರುಗಳು ಪ್ರಭಾರ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಟಿ.ಭಾಸ್ಕರ್ ರವರು ಮಾತನಾಡಿ, ಬ್ಯಾಂಕು 2024–25ನೇ ಸಾಲಿನಲ್ಲಿ ರೂ.368.37 ಕೋಟಿಗಳಷ್ಟು ಠೇವಣಿ, ರೂ.208.97 ಕೋಟಿಗಳಷ್ಟು ಸಾಲ ಮತ್ತು ಮುಂಗಡಗಳು, ರೂ.187.81 ಕೋಟಿಗಳಷ್ಟು ಗುಂತಾವಣಿಗಳು ಮತ್ತು ರೂ.419.38 ಕೋಟಿಗಳಷ್ಟು ದುಡಿಯುವ ಬಂಡವಾಳ ಹೊಂದಿದ್ದು, ರೂ.2.61 ಕೋಟಿಗಳಷ್ಟು ನಿವ್ವಳ ಲಾಭಗಳಿಸಿರುವುದನ್ನು ವಿವರಿಸಿ, ಸದಸ್ಯರುಗಳಿಗೆ ಶೇ.15 ರಂತೆ ಡಿವಿಡೆಂಡ್ ನ್ನು ಘೋಷಿಸಿದರು.

# ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ನಿವ್ವಳ ಲಾಭ ರೂ. 15.31 ಕೋಟಿ




**ಬೆಂಗಳೂರು:** ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ವಿಜಯನಗರ, ಬೆಂಗಳೂರು, ಬ್ಯಾಂಕಿನ 2024-2025ನೇ ಸಾಲಿನ 44ನೇ ಸರ್ವ ಸದಸ್ಯರ ಮಹಾಸಭೆಯು ಬೆಂಗಳೂರಿನ ಗಂಗಮ್ಮ ತಿಮ್ಮಯ್ಯ ಇನ್ ಅಂಡ ಕನ್ವೆನ್ಷನ್ ಸೆಂಟರ್‌ನಲ್ಲಿ ಜರುಗಿತು.

ಬ್ಯಾಂಕಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ. ಹೆಚ್.ಸಿ. ಗೋಪಾಲ್ ರವರು ಮತ್ತು ಉಪಾಧ್ಯಕ್ಷರಾದ ಡಾ. ಪಿ.ಎಲ್. ವೆಂಕಟೇಶ್‌ಮೂರ್ತಿ ರವರು ಹಾಗೂ ನಿರ್ದೇಶಕರುಗಳಾದ ಶ್ರೀ. ಮರಿಯಪ್ಪ. ಪಿ, ಶ್ರೀ. ಸಿದ್ದಪ್ಪ. ಜಿ, ಶ್ರೀ. ಜಯರಾಂ. ಎಂ,ಶ್ರೀ. ರಾಜಗೋಪಾಲ್ ಹೆಗ್ಡೆ, ಶ್ರೀ. ವೀರಣ್ಣಗೌಡ. ಎಂ.ಟಿ, ಡಾ॥ ಉಮಾ ರಾಮು, ಶ್ರೀ. ಕೆಂಪಯ್ಯ. ಎಂ, ಶ್ರೀ. ಚನ್ನಕೇಶವ. ಡಿ.ಎಲ್, ಶ್ರೀ. ಚಂದ್ರಮೌಳಿ. ಎಸ್, ಶ್ರೀ. ಟಿ.ಆರ್. ಸ್ವಾಮಿ, ಶ್ರೀಮತಿ. ಚಂದ್ರಕಲಾ. ಕೆ, ಶ್ರೀಮತಿ. ಆರತಿ. ಹೆಚ್.ಆರ್, ಶ್ರೀ. ಪುಟ್ಟಸ್ವಾಮಿಗೌಡ. ಬಿ.ಟಿ, ಶ್ರೀ. ಕೃಷ್ಣಪ್ಪ. ಸಿ, ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಾದ ಶ್ರೀ. ಆನಂದ್ ರಾಮಯ್ಯ ರಮೇಶ್, ಶ್ರೀ. ಜವರಾಯಿಗೌಡ. ಬಿ.ಎಸ್, ಶ್ರೀ. ಶಿವಕುಮಾರ್. ಟಿ.ಎನ್ ರವರುಗಳು ಉದ್ಘಾಟಿಸಿದರು.

ನಂತರ ಮಾತನಾಡಿದ ಅಧ್ಯಕ್ಷರು, ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಇಡೀ ರಾಜ್ಯದಲ್ಲಿಯೇ ನಮ್ಮ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಬ್ಯಾಂಕಿನ ಡಿಜಿಟಲ್ ಸೌಲಭ್ಯಗಳಾದ UPI, CTS Clearing, RTGS/NEFT/IMPS, Mobile Banking, ATM, SMS Banking Facility, Safe Deposit Lockers ಮುಂತಾದ ಬ್ಯಾಂಕಿಂಗ್ ಸೌಲಭ್ಯಗಳು ಲಭ್ಯವಿದ್ದು, ಬ್ಯಾಂಕಿನ ದುಡಿಯುವ ಬಂಡವಾಳ ರೂ. 1533.13 ಕೋಟಿಗಳು, ಒಟ್ಟು ಷೇರು ಬಂಡವಾಳ ರೂ. 36.68 ಕೋಟಿಗಳು, ನಿಧಿಗಳು ರೂ. 121.92 ಕೋಟಿಗಳು, ರೂ. 693.46 ಕೋಟಿಗಳು ಹೂಡಿಕೆಗಳು, ರೂ. 1237.90 ಕೋಟಿಗಳು ಠೇವಣಿಗಳಿದ್ದು, ಸದರಿ ಸಾಲಿನಲ್ಲಿ ರೂ.726.16 ಕೋಟಿಗಳ ಸಾಲಗಳನ್ನು ವಿತರಿಸಿದ್ದು, ರೂ. 56.31 ಕೋಟಿಗಳು ಒಟ್ಟು ಎನ್.ಪಿ.ಎ. ಗಳಾಗಿದ್ದು, ನಿವ್ವಳ ಎನ್.ಪಿ.ಎ. 0.00% ಗಳಾಗಿರುತ್ತದೆ. ಒಟ್ಟು ರೂ. 20.69 ಕೋಟಿಗಳ ಲಾಭಗಳಿಸಿದ್ದು, ಆದಾಯ ತೆರಿಗೆ ರೂ. 5.38 ಕೋಟಿಗಳು ಪಾವತಿಸಿ, ನಿವ್ವಳ ಲಾಭ ರೂ. 15.31 ಕೋಟಿಗಳನ್ನು ಹೊಂದಿದ್ದು, ಸದರಿ ವರ್ಷದ ಆಡಿಟ್ ವರ್ಗೀಕರಣದನ್ವಯ “ಎ” ಶ್ರೇಣಿಯನ್ನು ಪಡೆದಿದ್ದು, FSWM (Financial Sound and Well Managed) ಮಾನದಂಡವನ್ನು ಪೂರೈಸಿರುತ್ತದೆ. ಬ್ಯಾಂಕಿನ ಸದಸ್ಯರ, ಗ್ರಾಹಕರ, ಠೇವಣಿದಾರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಆರ್.ಬಿ.ಐ. ನಿರ್ದೇಶನದನ್ವಯ, ಸಹಕಾರ ಇಲಾಖೆಯ ಕಾನೂನುಗಳನ್ವಯ ಹಾಗೂ ಬ್ಯಾಂಕಿನ ಉಪನಿಯಮದನ್ವಯ ಬ್ಯಾಂಕು ಸಧೃಡವಾಗಿದ್ದು, ಯಾವುದೇ ಭೀತಿಯಿಲ್ಲದೆ ಬ್ಯಾಂಕಿನ ಸದಸ್ಯರು, ಗ್ರಾಹಕರು ಠೇವಣಿದಾರರು ಹೆಮ್ಮೆಯಿಂದ ನಮ್ಮ ಬ್ಯಾಂಕು ಎಂಬ ಹೆಗ್ಗಳಿಕೆಯಿಂದ ಬ್ಯಾಂಕಿನ ಬಗ್ಗೆ ಪ್ರಚಾರ ಮಾಡಬಹುದು ಎಂದು ಅಧ್ಯಕ್ಷರು ಅಭಿಪ್ರಾಯ ವ್ಯಕ್ತಪಡಿಸಿದರು.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

ದಿ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್.ಸಿ. ಗೋಪಾಲ್ ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.



# ವಿಜಯಪುರದ ಸರಕಾರಿ ನೌಕರರ ಸಹಕಾರಿ ಬ್ಯಾಂಕಿಗೆ 3 ರಾಷ್ಟ್ರೀಯ ಪ್ರಶಸ್ತಿ






**ವಿಜಯಪುರ:** ಶತಮಾನದ ಹೆಗ್ಗಳಿಕೆಯ ಸರಕಾರಿ ನೌಕರರ ಸಹಕಾರಿ ಬ್ಯಾಂಕಿಗೆ ಬ್ಯಾಂಕಿನ ಹಣಕಾಸು ಸ್ಥಿರತೆ ಮತ್ತು ಸದೃಢತೆಯನ್ನು ಖಚಿತಪಡಿಸಿಕೊಂಡು ಸಹಕಾರಿ ಬ್ಯಾಂಕಿಂಗ್ ಶ್ರೇಷ್ಠತೆಯನ್ನು ಪರಿಗಣಿಸಿ ದಿನಾಂಕ : 25/07/2025 ರಂದು ಪುಣೆ ಮಹಾರಾಷ್ಟ್ರದಲ್ಲಿ NAFCUB, Delhi ಇವರ ಸಹಬಾಗಿತ್ವದಲ್ಲಿ ಜರುಗಿದ 2nd Urban Cooperative Banking Summit & Rashtriya Coop Samman Samaroh 2025 ರಾಷ್ಟ್ರೀಯ ಮಟ್ಟದ ಕಾರ್ಯಕ್ರಮದಲ್ಲಿ ನಮ್ಮ ಬ್ಯಾಂಕಿಗೆ

1. Best Urban Co-operative Bank (Salary Earner's Bank)
2. Best Md : Smt M V Parwati General Manager
3. Best CBS Implementation

ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ರಾಷ್ಟ್ರೀಯ ಮಟ್ಟದ ಈ ಸಮಾರಂಭದಲ್ಲಿ NAFCUB, Delhi Chief Executiveರಾದ ಶ್ರೀ ಯೋಗೇಶ ಶರ್ಮಾ ಹಾಗೂ ನಿರ್ದೇಶಕರುಗಳು ಈ 3 ರಾಷ್ಟ್ರೀಯ ಪ್ರಶಸ್ತಿಗಳನ್ನು ಪ್ರಧಾನ ಮಾಡಿದ್ದು ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆನಂದಗೌಡ ಎನ್ ಬಿರಾದಾರ, ಉಪಾಧ್ಯಕ್ಷರಾದ ಶ್ರೀ ಮಲಕಪ್ಪ ಎಸ್ ಟಕ್ಕಳಕಿ ನಿರ್ದೇಶಕರಾದ ಶ್ರೀ ಅರವಿಂದ ಬಿ ಹೂಗಾರ, ಶ್ರೀ ಅರ್ಜುನ ಜಿ ಲಮಾಣಿ, ಶ್ರೀ ಹಣಮಂತ ಬಿ ಕೊಣದಿ, ಶ್ರೀ ಅಲಾಭಕ್ಷ ಎಮ್ ವಾಲಿಕಾರ, ಶ್ರೀ ಅಶೋಕ ವಿ ಚನಬಸಗೋಳ, ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಎಮ್ ವಿ ಪರ್ವತಿ ಮತ್ತು ಕಂಪ್ಯೂಟರ ಇಂಜೀನಿಯರರಾದ ಶ್ರೀ ಸಿ ಎಸ್ ಹಿರೇಮಠ ಉಪಸ್ಥಿತರಿದ್ದು ಪ್ರಶಸ್ತಿಗಳನ್ನು ಸ್ವೀಕರಿಸಿದರು.

## ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರಿಗೆ ಹಾಗೂ ಹೊಸದಾಗಿ ಆಯ್ಕೆಯಾದ ನಿರ್ದೇಶಕರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ದಿನಾಂಕ:22ನೇ ಆಗಸ್ಟ್ 2025ರ ಶುಕ್ರವಾರ ರಂದು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರಿಗೆ ಹಾಗೂ ಹೊಸದಾಗಿ ಆಯ್ಕೆಯಾದ ನಿರ್ದೇಶಕರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು "ರಜನಿ ಸಭಾ ಭವನ" ಮಿನಿಹಾಲ್, ದಾನೇಶ್ವರಿ ನಗರ, ಹಾವೇರಿ – 581 110 (ಬಸ್ ನಿಲ್ದಾಣದ ಹತ್ತಿರ) ಇಲ್ಲಿ ಏರ್ಪಡಿಸಲಾಗಿರುತ್ತದೆ.

ಸದರಿ ವಿಚಾರ ಸಂಕಿರಣದಲ್ಲಿ Role of Board of Directors for UCBs, FSWM Banks and PCA Norms, Technology Adoption – Role of NPCI and its Products, Recent RBI Guidelines ವಿಷಯಗಳ ಕುರಿತು ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಸದರಿ ಕಾರ್ಯಕ್ರಮವನ್ನು ದಿನಾಂಕ : 22.08.2025ರಂದು ಬೆಳಿಗ್ಗೆ 08.30 ಗಂಟೆಗೆ ಉಪಹಾರ ಹಾಗೂ ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು.

ಸದರಿ ವಿಚಾರ ಸಂಕಿರಣದಲ್ಲಿ ಭಾಗವಹಿಸುವವರು ಮಹಾಮಂಡಳದಲ್ಲಿ ದಿನಾಂಕ : 16.08.2025 ರೊಳಗಾಗಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಈ ವಿಚಾರ ಸಂಕಿರಣದಲ್ಲಿ ತಪ್ಪದೇ ಭಾಗವಹಿಸಿ ಇದರ ಸದುಪಯೋಗಪಡೆದು ಕೊಳ್ಳಬೇಕೆಂದು ವಿನಂತಿಸಲಾಗಿದೆ.

## 12th Batch (DUCBM) ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗೆ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ Diploma in Urban Cooperative Banking Management ಕೋರ್ಸ್‌ನ್ನು ಪ್ರಾರಂಭಿಸಿರುತ್ತದೆ.

11ನೇ ಬ್ಯಾಚಿನ ಪರೀಕ್ಷೆಯ ಫಲಿತಾಂಶ ಸದ್ಯದಲ್ಲಿಯೆ ಬರಲಿದ್ದು, ಈಗ 12ನೇ ಬ್ಯಾಚ್‌ನ ಡಿಯುಸಿಬಿಎಂ ಕೋರ್ಸ್‌ನ್ನು ಪ್ರಾರಂಭಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಕೋರ್ಸ್‌ನ್ನು ಮಹಾಮಂಡಳ, ಆರ್‌ಐಸಿಎಂ ಮತ್ತು ಎನ್‌ಸಿಸಿಟಿ ನವದೆಹಲಿ ಇವುಗಳ ಸಹಯೋಗದೊಂದಿಗೆ ನಡೆಸಲಾಗುವುದು. ಸದರಿ ಕೋರ್ಸ್ ನೌಕರರ ಮುಂಬಡ್ತಿಗೆ ಅನ್ವಯವಾಗುತ್ತದೆ ಹಾಗೂ ಬ್ಯಾಂಕಿನ ಅಭಿವೃದ್ಧಿಗೆ ಸಹಕಾರವಾಗುತ್ತದೆ.

ಪ್ರತಿ ಅಭ್ಯರ್ಥಿಗೆ ಕೋರ್ಸ್‌ನ ಶುಲ್ಕ ರೂ.5,700. + (GST) 1026. ಒಟ್ಟು 6,726/–ಗಳನ್ನು ನಿಗದಿಪಡಿಸಲಾಗಿದೆ. ಅರ್ಜಿಯನ್ನು ಭರ್ತಿ ಮಾಡಿ ಕಳುಹಿಸಲು ಕೊನೆಯ ದಿನಾಂಕ : 16.08.2025 ಆಗಿರುತ್ತದೆ. ಈ ಸದರಿ ಕೋರ್ಸ್‌ನ ಅವಧಿಯು ಮೂರು ತಿಂಗಳು ಆಗಿರುತ್ತದೆ.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






» **ಸುಧಾಕರ್ ಭಟ್**, ಬ್ಯಾಂಕಿಂಗ್ ಸಲಹೆಗಾರರು.


**01. ನಮ್ಮ ಬ್ಯಾಂಕಿನ ಒಬ್ಬ ಸದಸ್ಯರು ಅವರು ನಿರ್ದೇಶಕರಾಗಿ ಆಯ್ಕೆ ಆಗುವ ಮೊದಲು ಅವರ ಅತ್ತೆಯ ಹೆಸರಿನಲ್ಲಿ ಸಾಲವಿದ್ದು ಅದು ಸುಸ್ತಿಯಾಗಿದೆ. ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ಬ್ಯಾಂಕು ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಗಳಿಗೆ ಸಾಲ ನೀಡುವಂತಿಲ್ಲ. ಸಾಲ ಮರುಪಾವತಿಯಾಗದಿದ್ದರೆ ನಿರ್ದೇಶಕ ಸ್ಥಾನದಿಂದ ಅನರ್ಹಗೊಳ್ಳುವುದಾಗಿ ಮೂರು ತಿಂಗಳ ನೋಟೀಸ್ ನೀಡಿದ್ದರೂ ಸಾಲ ಮರುಪಾವತಿಯಾಗಿಲ್ಲ. ಈ ಪರಿಸ್ಥಿತಿಯಲ್ಲಿ ಬ್ಯಾಂಕು ಕೈಗೊಳ್ಳಬೇಕಾದ ಕ್ರಮಗಳೇನು? ಭಾರತೀಯ ರಿಜರ್ವ್ ಬ್ಯಾಂಕಿಗೆ ಈ ಸಾಲವನ್ನು ನಿರ್ದೇಶಕರ ಸಂಬಂಧಿತ ಸಾಲವೆಂದು ತಿಳಿಸಬೇಕೆ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಳಗಾವಿ ಜಿಲ್ಲೆ.**

**ಉತ್ತರ:** ಒಬ್ಬ ವ್ಯಕ್ತಿ ತಾನು ಬ್ಯಾಂಕಿನ ನಿರ್ದೇಶಕನಾಗಿ ಚುನಾಯಿತನಾಗುವ ಮುನ್ನ ಆತ ಅಥವಾ ಆತನ ಸಂಬಂಧಿಕರು ಪಡೆದ ಸಾಲವನ್ನು ನಿರ್ದೇಶಕನಾದ ನಂತರ ತಕ್ಷಣ ಪಾವತಿಸಬೇಕು ಎಂದು ರಿಜರ್ವ್ ಬ್ಯಾಂಕಿನ ಯಾವುದೇ ನಿರ್ದೇಶನವಿಲ್ಲ. ಆದಾಗ್ಯೂ, ಉತ್ತಮ ಆಡಳಿತದ ಪ್ರಮಾಣವಾಗಿ ಅಂತಹ ಸಾಲಗಳನ್ನು ಆದಷ್ಟು ಬೇಗ ಹಿಂದಕ್ಕೆ ಪಡೆಯಬೇಕು ಎಂದು ರಿಜರ್ವ್ ಬ್ಯಾಂಕು ಬಯಸುತ್ತದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕಲಂ 29(ಸಿ) ಪ್ರಕಾರ ಒಬ್ಬ ನಿರ್ದೇಶಕ ತಾನು ಪಡೆದ ಸಾಲವನ್ನು ಮರುಪಾವತಿಸದಿದ್ದರೆ ಮಾತ್ರ ಬ್ಯಾಂಕಿನ ನಿರ್ದೇಶಕ ಸ್ಥಾನಕ್ಕೆ ಅನರ್ಹನಾಗುತ್ತಾನೆ.

ಕಾಯ್ದೆಯ ಈ ನಿಬಂಧನೆಗಳು ನಿರ್ದೇಶಕರ ಸಂಬಂಧಿಕರು ಪಡೆದ ಸಾಲಕ್ಕೆ ಅನ್ವಯವಾಗುವುದಿಲ್ಲ. ಆದ್ದರಿಂದ, ಒಬ್ಬ ವ್ಯಕ್ತಿ ಬ್ಯಾಂಕಿನ ನಿರ್ದೇಶಕನಾಗುವ ಮೊದಲು ಆತನ ಸಂಬಂಧಿಗಳು ಪಡೆದ ಸಾಲ ಸುಸ್ತಿಯಾಗಿದ್ದರೆ, ಅದಕ್ಕಾಗಿ ಆತನನ್ನು ಬ್ಯಾಂಕಿನ ನಿರ್ದೇಶಕ ಸ್ಥಾನದಿಂದ ಅನರ್ಹಗೊಳಿಸಲು ಸಾಧ್ಯವಿಲ್ಲ. ವ್ಯಕ್ತಿ ಬ್ಯಾಂಕಿನ ನಿರ್ದೇಶಕನಾಗುವ ಮೊದಲು ಆತ ಅಥವಾ ಆತನ ಸಂಬಂಧಿಗಳು ಪಡೆದ ಸಾಲಗಳನ್ನು ನಿರ್ದೇಶಕರ ಸಾಲವೆಂದು ರಿಜರ್ವ್ ಬ್ಯಾಂಕಿಗೆ ವರದಿ ಮಾಡಬೇಕು.

## ದಾವಣಗೆರೆ–ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಶೇ.18 ಡಿವಿಡೆಂಡ್ ಘೋಷಣೆ, ಸಮಾಜಮುಖಿ ಕಾರ್ಯಗಳಿಗೆ ಒತ್ತು




**ದಾವಣಗೆರೆ** : ಡಿಜಿಟಲ್ ಸೇವೆಯಲ್ಲಿ ಜಿಲ್ಲೆಯಲ್ಲಿಯೇ ಮುಂಚೂಣಿಯಲ್ಲಿರುವ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ದಾವಣಗೆರೆ–ಹರಿಹರ ಅರ್ಬನ್ ಸಹಕಾರ ಬ್ಯಾಂಕ್ 2024–25ನೇ ಸಾಲಿನಲ್ಲಿ ತನ್ನ ಸದಸ್ಯರಿಗೆ ಶೇ.18ರಷ್ಟು ಲಾಭಾಂಶ ನೀಡುತ್ತಿರುವುದಾಗಿ ಬ್ಯಾಂಕಿನ ಅಧ್ಯಕ್ಷ ಎನ್.ಎ. ಮುರುಗೇಶ್ ಘೋಷಿಸಿದರು. ನಗರದ ತ್ರಿಶೂಲ್ ಕಲಾ ಭವನದಲ್ಲಿ ಏರ್ಪಾಡಾಗಿದ್ದ ಬ್ಯಾಂಕಿನ 53ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬ್ಯಾಂಕಿನ ಆಡಳಿತ ಮಂಡಳಿಯು ಶೇ.18ರಷ್ಟು ಲಾಭಾಂಶವನ್ನು ನೀಡಲು ತೀರ್ಮಾನಿಸಿದೆ ಎಂದು ಅವರು ಘೋಷಿಸುತ್ತಿದ್ದಂತೆ ಷೇರುದಾರರು ಸರ್ವಾನುಮತದಿಂದ ಚಪ್ಪಾಳೆ ತಟ್ಟುವುದರ ಮೂಲಕ ಸ್ವಾಗತಿಸಿದರು.

ಈಚೆಗೆ ನಡೆದ 'ಸಿಂಧೂರ ಆಪರೇಷನ್' ಪ್ರೇರಣೆಯಿಂದ ದೇಶದ ಸೈನಿಕರಿಗೆ ತಮ್ಮ ಅಳಿಲು ಸೇವೆ ಸಲ್ಲಿಸುವ ದೃಷ್ಟಿಯಿಂದ ಬ್ಯಾಂಕಿನ ನಿರ್ದೇಶಕರು ಮತ್ತು ಸಿಬ್ಬಂದಿಗಳು ಸೇರಿ ಪ್ರತಿ ತಿಂಗಳು 11 ಸಾವಿರ ರೂ.ಗಳನ್ನು ನ್ಯಾಷನಲ್ ಡಿಫೆನ್ಸ್ ಫಂಡ್‌ಗೆ ಕಳುಹಿಸುವ ಮಹತ್ತರ ಸಂಕಲ್ಪ ಮಾಡಿದ್ದು, ಈಗಾಗಲೇ 4 ತಿಂಗಳಿನಿಂದ ಈ ಸೇವಾ ಕಾರ್ಯ ನಡೆದಿದೆ ಎಂದು ತಿಳಿಸಿದರು. ಒಟ್ಟಿನಲ್ಲಿ ಬ್ಯಾಂಕ್ ಕೇವಲ ಬ್ಯಾಂಕಿನ ಆರ್ಥಿಕ ಚಟುವಟಿಕೆಗಳಿಗೆ ಸೀಮಿತವಾಗದೆ, ಸಮಾಜಮುಖಿ ಕಾರ್ಯಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಹೆಮ್ಮೆಯ ಸಂಗತಿ ಎಂದು ಮುರುಗೇಶ್ ತಿಳಿಸಿದರು.

ಬ್ಯಾಂಕಿನ ಉಪಾಧ್ಯಕ್ಷ ಎಸ್.ಕೆ. ಪ್ರಭು ಪ್ರಸಾದ್, ನಿರ್ದೇಶಕರುಗಳಾದ ಕಿರುವಾಡಿ ವಿ. ಸೋಮಶೇಖರ್, ಎ.ಹೆಚ್.ಕುಬೇರಪ್ಪ, ಶ್ರೀಮತಿ ಜಯಮ್ಮ ಪರಶುರಾಮಪ್ಪ, ಶಂಕರ್ ಖಟಾವ್‌ಕರ್, ಬಿ. ಚಿದಾನಂದಪ್ಪ, ಕೆ.ಎಂ.ಜ್ಯೋತಿ ಪ್ರಕಾಶ್, ಪಿ.ಹೆಚ್. ವೆಂಕಪ್ಪ, ಬಿ. ನಾಗೇಂದ್ರಚಾರಿ, ಶ್ರೀಮತಿ ಉಮಾ ವಾಗೀಶ್, ಶ್ರೀಮತಿ ಅನಿತಾ ಕೋಗುಂಡಿ ಪ್ರಕಾಶ್, ಶ್ರೀಮತಿ ಅನುಪಾ ಡಾ॥ ವೀರೇಂದ್ರಸ್ವಾಮಿ, ಎ. ಕೊಟ್ರೇಶ್, ವಿಶಾಲ್ ಆರ್. ಸಂಘವಿ, ವೃತ್ತಿಪರ ನಿರ್ದೇಶಕರಾದ ಆರ್.ವಿ. ಸಿರಸಾಲಿಮಠ್, ಕಿರಣ್ ಆರ್.ಶೆಟ್ಟಿ, ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಕೆ.ಎಂ. ಬಸವರಾಜ, ಶ್ರೀಮತಿ ಜಿ.ಸಿ. ವಸುಂಧರ, ಶ್ರೀಮತಿ ಕೆ.ಎಂ. ಶೈಲಾ ಹಾಲಸ್ವಾಮಿ ಕಂಬಳಿ, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಕೆ.ಎಂ. ನಟರಾಜ್, ಉಪ ಪ್ರಧಾನ ವ್ಯವಸ್ಥಾಪಕ ಕೆ.ಎಂ. ರುದ್ರಮುನಿ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಶ್ರೀಮತಿ ಉಮಾ ವಾಗೀಶ್, ಶ್ರೀಮತಿ ಶೈಲಾ ಹಾಲಸ್ವಾಮಿ ಕಂಬಳಿ ಮತ್ತು ಶ್ರೀಮತಿ ಸಂಗೀತಾ ರಾಘವೇಂದ್ರ ಅವರುಗಳು ಪ್ರಾರ್ಥಿಸಿದರು. ನಿರ್ದೇಶಕ ಶಂಕರ್ ಖಟಾವ್‌ಕರ್ ಸ್ವಾಗತಿಸಿದರು. ಬ್ಯಾಂಕಿನ ವಾರ್ಷಿಕ ವರದಿಯನ್ನು ನಿರ್ದೇಶಕ ಎ.ಹೆಚ್. ಕುಬೇರಪ್ಪ ಓದಿದರು. ಹಿರಿಯ ಪತ್ರಕರ್ತ ಡಾ॥ ಹೆಚ್.ಬಿ. ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಕೋಲಾರದ ಆಸ್ಪತ್ರೆಯಲ್ಲಿ 38 ವರ್ಷದ ಮಹಿಳೆಯೊಬ್ಬರು ಹೃದಯ ಶಸ್ತ್ರಚಿಕಿತ್ಸೆಗೆ ದಾಖಲಾಗಿದ್ದರು. ಶಸ್ತ್ರಚಿಕಿತ್ಸೆಗೂ ಮುನ್ನ ವೈದ್ಯರು ಆಕೆಯ ರಕ್ತಕ್ಕೆ ಹೊಂದಿಕೆಯಾಗುವ ರಕ್ತಕ್ಕಾಗಿ ಹುಡುಕಾಟ ಆರಂಭಿಸಿದ್ದರು ಆಗ ಮಹಿಳೆಯಲ್ಲಿ ಅತ್ಯಂತ ಅಪರೂಪದ O Rh+ ರಕ್ತದ ಗುಂಪು ಪತ್ತೆಯಾಗಿದ್ದು, ವಿಶ್ವದಲ್ಲೇ CRIB ಪ್ರತಿಜನಕವನ್ನು ಹೊಂದಿರುವ ಮೊದಲ ಮಹಿಳೆಯಾಗಿದ್ದಾರೆ. ಮಹಿಳೆ ಮತ್ತು ಆಕೆಯ ಕುಟುಂಬದ ರಕ್ತದ ಮಾದರಿಗಳನ್ನು ಬ್ರಿಟನ್‌ನಲ್ಲಿರುವ ಬ್ರಿಸ್ಟಲ್ ಅಂತರರಾಷ್ಟ್ರೀಯ ರಕ್ತ ಗುಂಪು ಪ್ರಯೋಗಾಲಯಕ್ಕೆ (ಐಬಿಜಿಆರ್‌ಎಲ್) ಕಳುಹಿಸಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.
- ಪಾಲಕ್ಕಾಡ್ ಜಿಲ್ಲೆಯ ಒಟ್ಟಪಾಲಂನ ಕಿವುಡರ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ತಮ್ಮ ತಾಯಂದಿರೇ ಪ್ರೀತಿಯಿಂದ ಹೊಲಿದ ಯೂನಿಫಾರ್ಮ್ ಧರಿಸಿ ಹೆಮ್ಮೆಯಿಂದ ಶಾಲೆಗೆ ಬರುತ್ತಿದ್ದಾರೆ. ಶಾಲಾ ಅಧಿಕಾರಿಗಳು ಈ ವರ್ಷದ ಫೆಬ್ರವರಿಯಲ್ಲಿ ಕ್ಯಾಂಪಸ್‌ನಲ್ಲಿ ಸಣ್ಣ ಟೈಲರಿಂಗ್ ಘಟಕ, ಥನಿಮಾ ಉತ್ಪಾದನಾ ಕೇಂದ್ರವನ್ನು ಆರಂಭಿಸಿದ್ದರು. ಇದು ಮಕ್ಕಳ ಕಲಿಕೆ ಮತ್ತು ಜೀವನದ ನಡುವೆ ಸೇತುವೆ ನಿರ್ಮಿಸುವ ಗುರಿಯಾಗಿತ್ತು.
- ನವದೆಹಲಿಯಲ್ಲಿರುವ ರೈಲ್ವೆ ಭದ್ರತಾ ಪಡೆಯ (ಆರ್‌ಪಿಎಫ್) ಮಹಾನಿರ್ದೇಶಕಿಯಾಗಿ ಹಿರಿಯ ಐಪಿಎಸ್ ಅಧಿಕಾರಿ ಸೋನಾಲಿ ಮಿಶ್ರಾ ಅವರು ಅಧಿಕಾರ ಸ್ವೀಕರಿಸಿದ್ದಾರೆ. ಸೋನಾಲಿ ಅವರು ಈ ಹುದ್ದೆಗೆ ಏರಿದ ಮೊದಲ ಮಹಿಳಾ ಐಪಿಎಸ್ ಅಧಿಕಾರಿಯಾಗಿದ್ದಾರೆ.
- ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಮಾಸ್ತಿಯಲ್ಲಿ ಖಾಸಗಿ ಶಾಲೆಗಳನ್ನು ಮೀರಿಸುವಂತೆ ಕರ್ನಾಟಕ ಪಬ್ಲಿಕ್ ಸ್ಕೂಲ್ ತಲೆ ಎತ್ತಿ ನಿಂತಿದೆ ಗುಜರಾತಿನಲ್ಲಿ ಜನಿಸಿ, ಮೈಸೂರಿನಲ್ಲಿ ಓದಿ, ಅಮೆರಿಕದಲ್ಲಿ ನೆಲೆಸಿರುವ ಜನಾರ್ದನ್ ಠಕ್ಕರ್ ಎಂಬುವರು ತಮ್ಮ ಕುಟುಂಬ ಪ್ರತಿಷ್ಠಾನದ ಮೂಲಕ ಈ ಶಾಲೆಯನ್ನು ಅಭಿವೃದ್ಧಿ ಪಡಿಸಿದ್ದಾರೆ.
- ಬೆಂಗಳೂರು ಮೆಟ್ರೋ ಇತಿಹಾಸದಲ್ಲೇ ಮೊದಲ ಬಾರಿಗೆ ಯಶಸ್ವಿಯಾಗಿ ಮಾನವ ಅಂಗಾಂಗ ಸಾಗಣೆ ಮಾಡಲಾಗಿದೆ. ವೈದೇಹಿ ಆಸ್ಪತ್ರೆಯಿಂದ ಆರ್.ಆರ್.ನಗರದ ಸ್ಪರ್ಶ ಆಸ್ಪತ್ರೆಗೆ ಸಾಗಿಸಲಾಯಿತು.

## ಓದುಗರ ಅನಿಸಿಕೆ...




**ಗುರಿ ಸ್ವಾಗತಾರ್ಹ :** ಇದೀಗ ರಾಷ್ಟ್ರೀಯ ಸಹಕಾರ ನೀತಿಯನ್ನು ಘೋಷಿಸಲಾಗಿದ್ದು, ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಯುವಶಕ್ತಿಯು ಈ ಚಳವಳಿಯನ್ನು ಮುನ್ನಡೆಸಲು ಸಾಧ್ಯವಾಗಲಿದೆ ಎಂದು ಹೇಳಲಾಗಿದೆ. ಪ್ರವಾಸೋದ್ಯಮ, ಟ್ಯಾಕ್ಸಿ ಸೇವೆ, ವಿಮೆ ಮತ್ತು ಹಸುರು ಇಂಧನದಂತಹ ಕ್ಷೇತ್ರಗಳಲ್ಲಿ ಸಹಕಾರ ಸಂಘಗಳನ್ನು ಆರಂಭಿಸಿ 50 ಕೋಟಿ ಸಕ್ರಿಯ ಸದಸ್ಯರನ್ನು ತನ್ನ ವ್ಯಾಪ್ತಿಗೆ ತರುವ ಗುರಿ ಹೊಂದಿರುವುದು ಸ್ವಾಗತಾರ್ಹ.

**▸▸ ಚಿಕ್ಕ ರುದ್ರಪ್ಪ ಎಲ್., ರಾಮನಗರ**

**ರಾಜನ್ ಹೇಳಿರುವುದು ಸರಿಯಾಗಿದೆ :** ಆರ್‌ಬಿಐ ರೆಪೊ ದರ ಇಳಿಕೆಯಿಂದ ಹೂಡಿಕೆಗಳಿಗೆ ವೇಗ ದೊರೆಯುತ್ತದೆ ಎಂದು ಹೇಳಲಾಗುವುದಿಲ್ಲ. ಕೇಂದ್ರದ ಸಾಂಖ್ಯಿಕ ಸಚಿವಾಲಯದ ಅಂಕಿಅಂಶಗಳ ಪ್ರಕಾರ, ದೇಶದಲ್ಲಿ ಖಾಸಗಿ ವಲಯದ ಹೂಡಿಕೆ ಪಾಲು 11 ವರ್ಷಗಳಲ್ಲೇ ಕನಿಷ್ಠ ಮಟ್ಟಕ್ಕೆ ಕುಸಿದಿರುವಾಗ ಬಡ್ಡಿ ದರ ಇಳಿಸಿದರೆ ಎಲ್ಲವೂ ಸರಿಯಾಗಿಬಿಡುತ್ತದೆ ಎನ್ನುವುದರಲ್ಲಿ ಅರ್ಥವಿಲ್ಲ ಎಂದು ರಘುರಾಮ್ ರಾಜನ್ ಹೇಳಿರುವುದು ಸರಿಯಾಗಿದೆ.

**▸▸ ಜಯದೇವಪ್ಪ ಪಾಟೀಲ್., ಬಾಗಲಕೋಟೆ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.